ಸಾಕ್ಷಿಯನ್ನು ದಿಃ 16.08.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ.ಜಿ.ಎಸ್ ವಕೀಲರಿಂದಃ

ದಾವಾಸ್ವತ್ತುಗಳನ್ನು ಹೊರತು ಪಡಿಸಿ ಬೇರೆ ಒಟ್ಟು ಕುಟುಂಬದ ಸ್ವತ್ತುಗಳು ಇರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಸ್ವತ್ತುಗಳು ಇರುವುದಿಲ್ಲ. ನಿಪಿ 8 ರ ಸರ್ವೆ ನಂಬರ್ 4 ನಮ್ಮ ಕುಟುಂಬದ ಸ್ವತ್ತು ಆಗಿರುತ್ತದೆ. ಸದರಿ ಸ್ವತ್ತನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿ ವಾದಪತ್ರದಲ್ಲಿ ಸರ್ವೆನಂ 4 ರ ಬದಲಾಗಿ ಸರ್ವೆನಂ.104 ಎಂದು ನಮುದಾಗಿರುವುದಾಗಿ ಉತ್ತರಿಸುತ್ತಾರೆ. ನನ್ನ ತಾತನ ಹೆಸರು ರಾಮರೆಡ್ಡಿ ರಾಮರೆಡ್ಡಿ ರವರಿಗೆ 5 ಜನ ಮಕ್ಕಳು ಅವರುಗಳು ಮುನಿಸ್ವಾಮಿರೆಡ್ಡಿ ನಾರಾಯಣ ರೆಡ್ಡಿ ಒಬಳರೆಡ್ಡಿ , ಪಾಪಮ್ಮ ಮತ್ತು ಮುನಿವೆಂಕಟೇಶರೆಡ್ಡಿ ಇವರುಗಳ ಪೈಕಿ ನಾರಾಯಣ ರೆಡ್ಡಿ ಮತ್ತು ಪಾಪಮ್ಮ ಜೀವಂತ ಇರುವುದಿಲ್ಲ. ಅವರಿಗೆ ಮಕ್ಕಳು ಇರುತ್ತಾರೆ. ನಮ್ಮ ಕುಟುಂಬದ ಎಲ್ಲರನ್ನೂ ಈ ಪ್ರಕರಣದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ.

ನಿಪಿ 6 ಕ್ಕೆ ಸಂಬಂಧಪಟ್ಟ ಆರ್.ಆರ್ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 3 ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವ ಐ.ಹೆಚ್.ಆರ್ 2/87-88 ರ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 12 ರಲ್ಲಿ ನಮೂದಾಗಿರುವ ರಾಮಚಂದ್ರರೆಡ್ಡಿ ರವರು ನನ್ನ ತಾತನ ಸಹೋದರನಾಗಬೇಕು. ದಾವಸ್ವತ್ತುಗಳಿಗೂ ನಿಪಿ 12 ರ ಮ್ಯುಟೇಷನ್ ರಿಜಿಸ್ಟರ್ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 3 ರ ಸ್ವತ್ತನ್ನು ನಮ್ಮ ತಂದೆ ನನ್ನ ಸಹೋದರಿ ರಮಾದೇವಿ ರವರಿಗೆ ದಾನಪತ್ರ ಬರೆದುಕೊಟ್ಟಿರುತ್ತಾರೆ . ಅದರಂತೆ 2 ನೇ ಪ್ರತಿವಾದಿ ರಮಾದೇವಿರವರ ಹೆಸರಿಗೆ ಸದರಿ ಸ್ವತ್ತಿನ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ . ಸದರಿ ದಾನಪತ್ರವನ್ನು ರದ್ದುಗೊಳಿಸುವಂತೆ ಈ ಪ್ರಕರಣದಲ್ಲಿ ಪರಿಹಾರ ಕೋರಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀಸವಾಲುಃ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**